ಒಂದು ಕಾಲದಲ್ಲಿ ದೌಲತ್ತಿನ ಬಂಗಲೆಯೆಂದು ಕರೆಸಿಕೊಳ್ಳುತ್ತಿದ್ದ ಈ ಬಂಗಲೆ, 40ಕ್ಕೂ ಹೆಚ್ಚು ಕೋಣೆಗಳನ್ನು ಹೊಂದಿದ್ದು, ಹದಿನಾರು ಕಟ್ಟಿಗೆಗಳ ಚೌಕ ಕಂಬಗಳು ಇಲ್ಲಿವೆ. ಛತ್ತಿನ ಭಾರವು ಎಲ್ಲ ತೊಲೆಗಳಲ್ಲಿ ಹಂಚಿಕೆಯಾಗಿದೆ. ಇವುಗಳಲ್ಲಿ ದೇಸಿ ಕಲೆಯನ್ನು ಕಾಣಬಹುದು. ಕಾಷ್ಠ ಶಿಲ್ಪಗಳಲ್ಲಿ ಪ್ರಾಣಿ, ಪಕ್ಷಿ, ಹೂ ಗಿಡ, ಬಳ್ಳಿಗಳ ಚಿತ್ರವನ್ನು ಕೆತ್ತಲಾಗಿದೆ. ಹೂಬಳ್ಳಿಗಳ ಪಟ್ಟಿಕೆಗಳು ಇಡೀ ಮನೆ ತುಂಬಾ ಹರಡಿಕೊಂಡಿವೆ.

ಕೃಷ್ಣನ ವಿವಿಧ ಲೀಲೆಗಳ ಚಿತ್ರಗಳನ್ನೂ ಇಲ್ಲಿ ನೋಡಬಹುದು. ಇವಕ್ಕೆ ನೈಸರ್ಗಿಕ ಬಣ್ಣಗಳನ್ನು ಬಳಸಿರುವುದು ವಿಶೇಷ. ಆದರೆ ಈ ಚಿತ್ರರಚನಾಕಾರರ ಬಗ್ಗೆ ಎಲ್ಲಿಯೂ ಸುಳಿವು ಸಿಗುವುದಿಲ್ಲ. ಸ್ಥಳೀಯ ಸಂಶೋಧಕ ಡಾ. ಎಚ್.ಎನ್. ಚಿತ್ರಗಾರರವರು, ಕೊಪ್ಪಳದ ಕಿನ್ನಾಳದ ಕಲಾವಿದರಿಂದ ಚಿತ್ರಿಸಲಾಗಿದ್ದೆಂದು ಅಭಿಪ್ರಾಯಪಡುತ್ತಾರೆ.

—ಈರಣ್ಣ ಬೆಂಗಾಲಿ, ರಾಯಚೂರು





# ಎತ್ತಿನ ಗಾಡಿಯಲ್ಲ, ಇದು ಮಿನಿ ಬಂಡಿ

ವಾಯುವಿಹಾರಕ್ಕೆ ಹೋಗುತ್ತಿದ್ದಾಗ ರಸ್ತೆಯಲ್ಲಿ ಕಂಡ ಎತ್ತಿನ ಗಾಡಿ ನೋಡಿ ಆಶ್ಚರ್ಯವಾಯಿತು. ಇದು ಸಹಜ ಎತ್ತಿನಬಂಡಿಯಂತಿರಲಿಲ್ಲ. ಅದು ಮಿನಿ ಬಂಡಿಯಾಗಿತ್ತು. ರೈತರು ತಮ್ಮ ಕೃಷಿ ಉಪಕರಣಗಳು ಹಾಗೂ ದವಸ ಧಾನ್ಯ ಮತ್ತು ಜಾನುವಾರುಗಳ ಮೇವು ಸಾಗಿಸಲು ಬಳಸುತ್ತಿದ್ದ ಮರದ ಎತ್ತಿನ ಗಾಡಿ ಜಾಗಕ್ಕೆ ಟೈರ್‌ನ ಎತ್ತಿನ ಗಾಡಿಗಳು ಬಂದಿವೆ. ಈ ಟೈರ್‌ನ ಎತ್ತಿನ ಗಾಡಿಗಳನ್ನು ಮಿನಿ ಬಂಡಿಗಳನ್ನಾಗಿ ರೈತರು ಮಾರ್ಪಾಡಿಸಿದ್ದಾರೆ.

ಚಿತ್ರದಲ್ಲಿ ಕಾಣುತ್ತಿರುವ ಮಿನಿ ಬಂಡಿಯು ಮಂಡ್ಯ ನಗರದ ಸಮೀಪದಲ್ಲಿ ಇರುವ ಕಿರಗಂದೂರು ಗ್ರಾಮದ ಸಣ್ಣ ರೈತರೊಬ್ಬರದ್ದು. ಸಾಮಾನ್ಯವಾಗಿ ಟೈರ್‌ನ ಎತ್ತಿನ ಗಾಡಿ ಮಾಡಿಸಲು ₹60 ಸಾವಿರ ಬೇಕಾಗುತ್ತದೆ. ಸಣ್ಣ ರೈತರು ಅಷ್ಟೊಂದು ಹಣವನ್ನು ಭರಿಸಲು ಸಾಧ್ಯವಾಗದೇ ಮಿನಿ ಗಾಡಿಗಳತ್ತ ಮುಖಮಾಡುತ್ತಾರೆ. ಈ ಮಿನಿ ಬಂಡಿಗಳಿಗೆ ಬೈಕ್‌ನ ಎರಡು ಚಕ್ರಗಳನ್ನು ಅಳವಡಿಸಲಾಗಿದೆ. ಈ ಮಿನಿ ಬಂಡಿ ತಯಾರಿಕೆಗೆ ತಗಲುವ ವೆಚ್ಚ ₹15,000. ಸಣ್ಣ ಹಿಡುವಳಿ ರೈತರಿಗೆ ಈ ಎತ್ತಿನ ಮಿನಿ ಗಾಡಿ ವರದಾನವೇ ಸರಿ.

—ಸಿ. ಸಿದ್ದರಾಜು ಆಲಕೆರೆ, ಮಂಡ್ಯ

# ಕಾರಿನ ಮೇಲೆ 'ನಾನೊಬ್ಬ ರೈತ'

ಸಾಮಾನ್ಯವಾಗಿ ವಾಹನಗಳ ಹಿಂದೆ ಮುಂದೆಲ್ಲ ಜನರು ತಮ್ಮ ಜಾತಿ ಸೂಚಕ ಪದಗಳನ್ನೋ, ನೆಚ್ಚಿನ ನಟರ ಭಾವಚಿತ್ರಗಳನ್ನೋ, ಮನೆಯ ಮಕ್ಕಳ ಹೆಸರುಗಳನ್ನೋ ಹಾಕಿಸುವುದು ಸಾಮಾನ್ಯ. ಇನ್ನು ಕೆಲವರು ತಮ್ಮ ಉದ್ಯೋಗದ ಅನುಸಾರ ಪ್ರೆಸ್, ಡಾಕ್ಟರ್, ಲಾಯರ್, ಪೊಲೀಸ್ ಎಂದು ಕೂಡ ಬರೆಸಿಕೊಳ್ಳುತ್ತಾರೆ.

ಆದರೆ ಪ್ರವಾಸಕ್ಕೆಂದು ಗೋಕರ್ಣಕ್ಕೆ ಹೋದಾಗ ಕಂಡ ವಾಹನವೊಂದರ ಹಿಂಬದಿ ಗ್ಲಾಸ್ ಮೇಲೆ ಬರೆದಿದ್ದ ಅಕ್ಷರಗಳು ಮನಸೆಳೆದವು. ಅದರಲ್ಲಿ, 'ಐ ಆಮ್ ಎ ಫಾರ್ಮರ್' (ನಾನೊಬ್ಬ ರೈತ) ಎಂದು ಬರೆದಿದ್ದು ಹೆಮ್ಮೆಯೆನಿಸಿತು. ಕೃಷಿಯಿಂದ ಜನರು ವಿಮುಖರಾಗುತ್ತಿರುವ ಇಂತಹ ಸಂದರ್ಭದಲ್ಲಿ ಈ ಫಲಕ ರೈತರ ಮನೋಬಲವನ್ನು ಗಟ್ಟಿಗೊಳಿಸುವಂತಿದೆ. ಜೊತೆಗೆ ಕಾರಿನ ಮಾಲೀಕರ ಬೇಸಾಯದ ಪ್ರೀತಿ ಕಾಣುತ್ತದೆ.

—ಸುಘೋಷ ಸ. ನಿಗಳೆ, ಬೆಂಗಳೂರು

